ಅನುಭವಿಸಿದ ನಾನು ಅವಳ ಹೆತ್ತವರ ಶ್ರೀಮಂತಿಕೆಯತ್ತ ಆಕರ್ಷಿತನಾದುದು ನಿಜ. ಅವರು ನನ್ನನ್ನು ವಿದೇಶಕ್ಕೆ ಕಳುಹಿಸಿ ಇನ್ನೂ ಹೆಚ್ಚು ಓದಿಸಿದರು. ನನ್ನ ತಂಗಿಗೂ ಒಳ್ಳೆಯ ಗಂಡನ್ನು ಹುಡುಕಿ, ಮದುವೆಯ ಖರ್ಚನ್ನೂ ನೋಡಿಕೊಂಡರು.'

'ಅಂದರೆ ದುಡ್ಡಿಗಾಗಿ ನೀನ್ನನ್ನು ಮಾರಿಕೊಂಡೆ ಎನ್ನು' ಸುಜಾತಾ ನಡುವೆಯೇ ವ್ಯಂಗ್ಯವಾಗಿ ನುಡಿದಳು.

ಶಶಿಕಾಂತ ಶುಷ್ಕ ನಗೆ ನಕ್ಕು ಮುಂದುವರೆಸಿದ.

'ಅಮೆರಿಕೆಯಲ್ಲಿ ಉನ್ನತ ವ್ಯಾಸಂಗ ಮುಗಿಸಿ ಹಿಂದಕ್ಕೆ ಬಂದು ದೊಡ್ಡ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿಕೊಂಡೆ. ಲಕ್ಷ್ಮಿ ಒಳ್ಳೆಯ ಹೆಂಡತಿ. ಶ್ರೀಮಂತಿಕೆಯ ಗತ್ತಿರಲಿಲ್ಲ. ನಮಗೆ ಇಬ್ಬರು ಗಂಡು ಮಕ್ಕಳು. ಇಬ್ಬರಿಗೂ ಮದುವೆಯಾಗಿ ಅಮೆರಿಕೆಯಲ್ಲಿ ನೆಲಸಿದ್ದಾರೆ. 'ಸ್ವರ್ಗಕ್ಕೆ ಕಿಚ್ಚು' ಎನ್ನುವಂತಿತ್ತು ನನ್ನ ಸಂಸಾರ. ಯಾರ ದೃಷ್ಟಿ ತಾಗಿತೋ ಕಾಣೆ. ಕೆಲವರ್ಷಗಳ ಹಿಂದೆ ಲಕ್ಷ್ಮಿ ಕ್ಯಾನ್ಸರ್‌ಗೆ ಬಲಿಯಾದಳು. ನಾನು ಅನಾಥನಾದೆ. ಸುಜಾತಾ, ನಿಜ ಹೇಳಬೇಕೆಂದರೆ ಲಕ್ಷ್ಮಿ ನನ್ನ ಜತೆಯಲ್ಲಿ ಇರುವಷ್ಟು ಸಮಯ ನನಗೆ ನಿನ್ನ ನೆನಪಾಗಲಿಲ್ಲ. ನೆನಪಾಗಲು ಆಸ್ಪದ ಇಲ್ಲದಂತೆ ನಡೆದುಕೊಂಡಳು. ಈಗ ಅವಳು ಹೋದ ಬಳಿಕ ಬಟ್ಟ ಬಯಲಿನಲ್ಲಿ ನಿಂತ ಒಬ್ಬಂಟಿ ನಾನು. ನನ್ನ ಮಕ್ಕಳು ತಾಯಿಯನ್ನು ನೆಚ್ಚಿಕೊಂಡು ನನ್ನನ್ನು ಪ್ರೀತಿಸಲಿಲ್ಲ. ಬಹುಶಃ ಅಲ್ಲೂ ನನ್ನ ತಪ್ಪಿರಬೇಕು. ಜೀವನದಲ್ಲಿ, ಉದ್ಯೋಗದಲ್ಲಿ ಮೇಲೆ ಏರಬೇಕೆನ್ನುವ ಮಹತ್ವಾಕಾಂಕ್ಷೆಯಲ್ಲಿ ನಾನು ಯಾರನ್ನೂ ಪರಿಗಣಿಸಲಿಲ್ಲ. ಮಕ್ಕಳು ನನ್ನಿಂದ ದೂರವೇ ಉಳಿದರು. ತಾಯಿಯ ಮೃತ ಶರೀರವನ್ನು ನೋಡಲು ಬಂದು ಹೋದ ನನ್ನ ಮಕ್ಕಳಿಬ್ಬರು ಆ ಮೇಲೆ ನನ್ನನ್ನು ವಿಚಾರಿಸಲಿಲ್ಲ. ಲಕ್ಷ್ಮಿಯನ್ನು ಕಳಕೊಂಡ ಬಳಿಕ ನಾನೂ ನಿವೃತ್ತನಾದೆ. ಬೇರೆ ಕಂಪೆನಿಗಳಲ್ಲಿ ಪ್ರಯತ್ನಿಸಬಹುದಾಗಿತ್ತು. ಆದರೆ ಜೀವನದಲ್ಲಿ ಆಸಕ್ತಿಯನ್ನೇ ಕಳಕೊಂಡ ಬಳಿಕ ನನಗೆ ಅದರ ಅಗತ್ಯ ಕಾಣಲಿಲ್ಲ. ಮಾವನಿಂದ ದೊರೆತ ಆಸ್ತಿ ಪಾಸ್ತಿ, ನನ್ನ ಸಂಪಾದನೆ ಸಾಕಷ್ಟಿದೆ. ಆದರೆ ಮನಸ್ಸಿಗೆ ನೆಮ್ಮದಿ ಇಲ್ಲ. ಹಣ ಮನುಷ್ಯನಿಗೆ ಎಲ್ಲವನ್ನೂ ಕೊಡುವುದಿಲ್ಲ ಎನ್ನುವ ಸತ್ಯದ ಅರಿವಾದಾಗಲೆಲ್ಲ ನಿನ್ನ ನೆನಪು ನನ್ನನ್ನು ಕಾಡತೊಡಗಿತು. ನಿನಗೆ ನನ್ನಿಂದ ಅನ್ಯಾಯವಾಗಿದೆ. ನಾನು ದ್ರೋಹ ಮಾಡಿದೆ ಸುಜಾತಾ. ಇದಿಷ್ಟೇ ನಾನು ಹೇಳ ಬಯಸುವುದು.'

ಒಂದೇ ಉಸಿರಿಗೆ ಎಲ್ಲವನ್ನೂ ಹೊರಚೆಲ್ಲಿ ಆತ ಮುಂದೆ ಮಾತನಾಡಲು ತೋಚದೆ ದೀರ್ಘ ಶ್ವಾಸ ತೆಗೆದುಕೊಂಡ.

ಸುಜಾತಾ ಎದ್ದು ನಿಂತಳು. ಆತ ಕುರ್ಚಿಯಿಂದ ಏಳುವ ಮೊದಲೇ ಅವನನ್ನು ದಾಟಿ ಬಂದು ನೇರ ರಸ್ತೆಗೆ ಇಳಿದು ಹೋದಳು. ಉಸಿರು ಕಟ್ಟಿ ನಡೆದ ಆಕೆಯ ಕಾಲುಗಳು ನಿಂತುದು ಶ್ರೀನಿವಾಸರಾಯರ ಕಾಟೇಜ್ ಸೇರಿದ ಬಳಿಕವೇ. ಮೇಲುಸಿರು ಬಿಡುತ್ತ ಅಲ್ಲೇ ಮೆಟ್ಟಲ ಮೇಲೆ ಕುಸಿದು ಕುಳಿತಳು.

ವಸುಂಧರಾ ದೇವಿ ಹತ್ತಿರ ಬಂದು ಅವಳ ಹೆಗಲ ಮೇಲೆ ಕೈ ಇಟ್ಟಾಗಲೇ ಸುಜಾತಾ ಇಹಲೋಕಕ್ಕೆ ಬಂದದ್ದು. ದುಃಖ, ಕೋಪ ಸಮ್ಮಾನಗಳಿಂದ ಅವಳ ಕಣ್ಣೀರು ಕೋಡಿಯಾಗಿ ಹರಿದು ಸೀರೆ ಎಲ್ಲ ಒದ್ದೆಯಾಗಿ ಹೋಯಿತು. ಅಷ್ಟು ಹೊತ್ತಿಗಾಗಲೇ ಶ್ರೀನಿವಾಸ ರಾಯರೂ ಅವಳ ಬಳಿಗೆ ಬಂದು ಇನ್ನೊಂದು ಪಕ್ಕದಲ್ಲಿ ಕುಳಿತು ಅವಳ ತಲೆ ನೇವರಿಸಿದರು. ಈಗಂತೂ ಅಳುತ್ತಲೇ ಅವರು ಕೇಳದೆಯೇ ತನ್ನ, ಶಶಿಕಾಂತನ ಬಗ್ಗೆ ಎಲ್ಲವನ್ನೂ ಹೇಳಿದಳು. ಅವಳನ್ನು ಸಮಾಧಾನಿಸಲು ಅವರಿಗೆ ವಾಕ್ಯಗಳೇ ದೊರೆಯಲಿಲ್ಲ. 'ದೇವರು ಇದ್ದಾನೆ' ಎನ್ನುವುದನ್ನು